REGD.NEWS PAPER RNI 50347/1989
RNI.Reg.No.KA/BGGPO/2516/2021-23
NO.MAG(3) /NPP/273 2022-2023
Licenced to post without Pre-payment
Registered Regn.No. PMG/BG/WPP-CO -1 /2021-2023
Posted at BANGALORE PSO, MYSORE ROAD,
BANGALORE – 560026

Date of publication 18th of every month
Permitted to post on 20th or 21st

ಕರ್ನಾಟಕ ಆರ್ಯವೈಶ್ಯ ಮಹಾಸಭಾ (ರಿ)

# ವಾರ್ತಾಪತ್ರ

ಕನ್ನಡ ಮಾಸ ಪತ್ರಿಕೆ



ನಂ.16, ಶೇಷಾದ್ರಿ ರಸ್ತೆ, ಗಾಂಧಿನಗರ, ಬೆಂಗಳೂರು – 560009
ದೂರವಾಣಿ : 080–22206151 – 22206152 – 22206153
Website: www.kavms.com E-mail: kavmss@gmail.com

ಸಂಪಾದಕರು:
ರಾ.ಪ. ರವಿಶಂಕರ್

ಕಾರ್ಯಾಲಯ ಸಮಯ { ವಾರದ ದಿನಗಳಲ್ಲಿ ಬೆಳಿಗ್ಗೆ : 10.30 ರಿಂದ ಸಂಜೆ: 5.30
ಭಾನುವಾರ : ಬೆ. 10.30 ರಿಂದ ಮಧ್ಯಾಹ್ನ : 3.00ರ ವರೆಗೆ

ಸಂಪುಟ : 36 ಸೆಪ್ಟೆಂಬರ್ 2023 ಬೆಲೆ : 1 ರೂ. ಪುಟಗಳು : 4 ಸಂಚಿಕೆ : 09

## ಅಧ್ಯಕ್ಷರ ನುಡಿ



ಸೆಪ್ಟಂಬರ್ 5, ಎಂದರೇ ಈ ದೇಶಕ್ಕೆ ಶಾಶ್ವತವಾದ ಹಬ್ಬ, ಅದುವೇ ಈ ದೇಶದ ಪ್ರಥಮ ಉಪರಾಷ್ಟ್ರಪತಿಗಳಾಗಿ, ಎರಡನೇ ರಾಷ್ಟ್ರಪತಿಗಳಾಗಿ ಕಾರ್ಯನಿರ್ವಹಿಸಿದ ವಿಶ್ವಮಾನ್ಯತೆ ಪಡೆದ ಶಿಕ್ಷಕರಾದ ಡಾ॥ಸರ್ವೆಪಲ್ಲಿ ರಾಧಕೃಷ್ಣನ್‌ರವರ ಜನುಮದಿನ. ಒಬ್ಬ ವಿದ್ವಾಂಸನಾಗಿ, ತತ್ವಜ್ಞಾನಿಯಾಗಿ, ರಾಜಕಾರಣಿಯಾಗಿ ದೇಶ ಕಟ್ಟಿದ, ಮರೆಯದಂತಹ ಮಾಣಿಕ್ಯ ಡಾ॥ ಸರ್ವೆಪಲ್ಲಿ ರಾಧಾಕೃಷ್ಣನ್‌ರವರಂತಹ ಪ್ರಬುದ್ಧ ವ್ಯಕ್ತಿಯ ಜನ್ಮದಿನವನ್ನು ಆಚರಿಸುವ ಮೂಲಕ, ಈ ದೇಶದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಸಂಖ್ಯಾತ ಸುಸಂಸ್ಕೃತ ಶಿಕ್ಷಕರಿಗೆ ದೇಶದ ಕೋಟ್ಯಾನು ಕೋಟಿ ನಾಗರೀಕರು ನೀಡುವ ಗೌರವದ ದಿನವಾಗಿದೆ. **ಡಾ॥ ಸರ್ವೆಪಲ್ಲಿ ರಾಧಾಕೃಷ್ಣನ್‌ರವರು ಶಿಕ್ಷಕರು ಅಥವಾ ರಾಷ್ಟ್ರಪತಿಗಳು ಆಗಿದ್ದರು ಎಂಬುದಕ್ಕೆ ಮಾತ್ರ ಅವರ ಜನ್ಮದಿನವನ್ನು ಈ ಪರಿಯಾಗಿ ಹಬ್ಬದಂತೆ ಆಚರಣೆ ಮಾಡುತ್ತಿಲ್ಲ, ಶಿಕ್ಷಕರಾಗಿ, ದೇಶದ ಸಾವಿರ ಸಾವಿರ ಯುವಜನತೆಗೆ ವ್ಯವಸ್ಥಿತ ಶಿಕ್ಷಣ ನೀಡುವ ಮೂಲಕ ಜ್ಞಾನ, ಅನುಭವ ಮತ್ತು ಉತ್ತಮ ಮನೋಭಾವವನ್ನು ಮೂಡಿಸುವಂತಹ ಸ್ವಾಭಿಮಾನಿ ಯುವಜನತೆಯನ್ನು ದೇಶಕ್ಕೆ ನೀಡಿದ ಮಹಾನ್ ಚೇತನ**. ಶಿಕ್ಷಣದಿಂದ ಮಾತ್ರ ದೇಶದ ಅಭಿವೃದ್ಧಿಯೆಂದು ಸಾರಿ ಸಾರಿ ಹೇಳಿದ್ದಲ್ಲದೆ ಅದಕ್ಕೆ ತಕ್ಕಂತೆ ಕಾರ್ಯನಿರ್ವಹಿಸಿದ ಶಿಕ್ಷಣ ಕ್ಷೇತ್ರದ ಮರೆಯದ ಮಾಣಿಕ್ಯ ದಿನಾಂಕ: 17–04–1975ರಲ್ಲಿ ಭಗವಂತನ ಪಾದಪದ್ಮಗಳಲ್ಲಿ ಲೀನರಾದರು.

**ಶಿಕ್ಷಣವು ಜಗತ್ತನ್ನು ಬದಲಾಯಿಸುವ ಪ್ರಮುಖ ಅಸ್ತ್ರ. ಉತ್ತಮ ಶಿಕ್ಷಣ ವ್ಯಕ್ತಿಯ ಬೆಳವಣಿಗೆಯಲ್ಲಿ ಮಹತ್ವದ ಪಾತ್ರ ವಹಿಸುತ್ತದೆ. ಶಿಕ್ಷಣ ಕೇವಲ ಅಕ್ಷರ ಕಲಿಕೆಯಲ್ಲ, ಅದು ವ್ಯಕ್ತಿಯ ಜ್ಞಾನ ದಾಹವನ್ನು ಹೆಚ್ಚಿಸುವ ಮತ್ತು ಸ್ವಾವಲಂಬಿಯನ್ನಾಗಿಸುವ ಪ್ರಮುಖ ಅಸ್ತ್ರ**. ಸಂಸ್ಕಾರಯುತ ಶಿಕ್ಷಣ ಸಮಾಜದ ಅನಿಷ್ಟಗಳನ್ನು ನಿಗ್ರಹಿಸಿ ಉತ್ತಮ ಸಮಾಜದ ನಿರ್ಮಾಣಕ್ಕೆ ಸಹಕಾರಿಯಾಗುತ್ತದೆ. ಶಿಕ್ಷಣ ಎಂದರೇ ಕೇವಲ ಇತಿಹಾಸಗಳನ್ನು ಓದುವುದು, ತಿಳಿದುಕೊಳ್ಳುವುದು ಅಲ್ಲ. ಆಯಾ ಕಾಲಮಾನಕ್ಕೆ ತಕ್ಕಂತೆ ಜ್ಞಾನ, ಕೌಶಲ್ಯ, ತಂತ್ರಜ್ಞಾನಗಳ ಮಾಹಿತಿಗಳನ್ನು ತಿಳಿಸಿಕೊಡುವುದು ಶಿಕ್ಷಣ. ನಾಗರೀಕ ಸಮಾಜವು ತಮ್ಮ ಹಕ್ಕುಗಳ ಮತ್ತು ಕರ್ತವ್ಯಗಳ ಬಗ್ಗೆ ತಿಳಿದುಕೊಳ್ಳಲು ಅವಕಾಶ ಮಾಡಿಕೊಡುವುದೇ ಶಿಕ್ಷಣ, ವಿದ್ಯಾರ್ಥಿಗಳ ಸೃಜನ ಶೀಲತೆ ರಾಷ್ಟ್ರದ ಅಭಿವೃದ್ಧಿಗೆ ದೊಡ್ಡ ಕೊಡುಗೆ ಆಗುತ್ತದೆ.

**ಶಿಕ್ಷಣವು ವ್ಯಕ್ತಿತ್ವವನ್ನು ನಿರ್ಮಿಸುವ, ಮನಸ್ಸನ್ನು ಬಲಪಡಿಸುವ ಮತ್ತು ಬುದ್ಧಿ ಶಕ್ತಿಯನ್ನು ವಿಕಸನಗೊಳಿಸುವ ನಿರಂತರ ಪ್ರಕ್ರಿಯೆ**. ಶಾಲಾ, ಕಾಲೇಜುಗಳಲ್ಲಿ ಕಲಿತದ್ದನ್ನು ಕಾಲಾನಂತರ ನಾವು ಮರೆತರೂ ಸಹ ಅದರ ಸಾರಾಂಶ ನಮ್ಮೊಂದಿಗೆ ಉಳಿದೇ ಇರುತ್ತದೆ. ಶಿಕ್ಷಣವೂ ಎಲ್ಲವನ್ನು ಒಡೆಯುತ್ತದೆ ಮತ್ತು ಎಲ್ಲಾ ಬಂಧಗಳನ್ನು ಬಲಪಡಿಸುತ್ತದೆ. **ಶಿಕ್ಷಣ ಎನ್ನುವುದು ಮನಸ್ಸಿಗೆ ನೀಡುವ ತರಬೇತಿಯೇ ಹೊರತು ಮೆದುಳಿಗೆ ತುಂಬುವ ಸರಕ್ಕಲ್ಲ**. ಇದು ಕಲ್ಪನೆಗಳ ಸಮೀಕರಣವಾಗಿದೆ. ನಮ್ಮ ದೇಶಿಯ ಶಿಕ್ಷಣದ ಪರಿಕಲ್ಪನೆಯಲ್ಲಿ ಶಿಕ್ಷಣವು ಸಾಮಾಜಿಕ, ಆರ್ಥಿಕ, ರಾಜಕೀಯ ಧಾರ್ಮಿಕ ಮತ್ತು ತಾತ್ವಿಕವಾದ ಎಲ್ಲಾ ಕಟ್ಟು ಪಾಡುಗಳಿಂದ ಚಿಂತನೆಗಳಿಂದ ಮುಕ್ತಗೊಳಿಸಿ, **ಮನಸ್ಸಿನ ಕತ್ತಲೆಯನ್ನು ದೂರಮಾಡಿ, ಬೆಳಕಿನೆಡೆಗೆ ಕರೆದೊಯ್ಯುವಂತಹ ವ್ಯಕ್ತಿಯನ್ನು ಬಲಗೊಳಿಸುವ ಪ್ರಬಲ ಶಕ್ತಿಯಾಗಿದೆ**. ಇದೊಂದು ನಿರಂತರ ಪ್ರಕ್ರಿಯೇ, ಕೇವಲ **ವಿದ್ಯಾವಂತರನ್ನು ಸೃಷ್ಟಿಸುವ ಶಿಕ್ಷಣದಿಂದ ವ್ಯಕ್ತಿಯ ಜೀವನ ನಿರ್ವಹಣೆ ಆಗಬಹುದು**, ಆದರೆ ಯಾವ ಶಿಕ್ಷಣದಿಂದ ಜ್ಞಾನವಂತರ ತಂಡ ಉದಯವಾಗುವುದೋ **ಅದೇ ಶಿಕ್ಷಣ, ಅದೇ ದೇಶದ ಅಭಿವೃದ್ಧಿಗೆ ರಹದಾರಿ, ಅವರೇ ದೇಶದ ಸಂಪತ್ತು**.

**ಜೀವನವೇ ಶಿಕ್ಷಣ,** ಕಲಿಯಲು ವಯೋಮಿತಿಯಿಲ್ಲ, ಒಂದು ಹಂತದ ನಂತರ ಕಲಿಯಲು ಶಾಲಾ ಕಾಲೇಜುಗಳಿಗೆ ಹೋಗಬೇಕಿಲ್ಲ. ಶಿಕ್ಷಣವು ಜೀವಿತಾವಧಿಯ ವ್ಯವಸ್ಥಿತ ಪ್ರಕ್ರಿಯೆ ಆಗಿದೆ. **ಶಿಕ್ಷಣ ಸಾಮಾಜಿಕ ಅಭಿವೃದ್ಧಿಯ ಶಕ್ತಿಯೂ ಹೌದು**. ಉತ್ತಮ ಶಿಕ್ಷಣ ನಮ್ಮ ನಡವಳಿಕೆಗಳಲ್ಲಿ ಬದಲಾವಣೆ ಹಾಗೂ ಸುಧಾರಣೆಗಳನ್ನು ತರುತ್ತದೆ. ಒಟ್ಟಾರೆ **ಶಿಕ್ಷಣವಿಲ್ಲದ ಜೀವನ ಸಾಧನೆಗೆ ಪೂರಕವಲ್ಲ**. ನಮ್ಮ ಜೀವನದ ಪ್ರತಿ ಹೆಜ್ಜೆಗೂ ಶಿಕ್ಷಣ ಅವಶ್ಯಕತೆ ಇದೆ.

**ಆದರೆ**...? ಮಾನವನ ಪರಿಪೂರ್ಣತೆಗೆ, ದೇಶದ ಅಭಿವೃದ್ಧಿಗೆ ಅತ್ಯಂತ ಮಹತ್ವ ಪೂರ್ಣವಾಗಿರುವ ಶಿಕ್ಷಣ ಕ್ಷೇತ್ರ ಇಚ್ಚಾಶಕ್ತಿಯಿಲ್ಲದ, ದೂರದೃಷ್ಟಿಯಿಲ್ಲದ, ಶಿಕ್ಷಣದ ಅಂತರಂಗ ಶಕ್ತಿಯನ್ನು ಅರಿಯದ ಅಧಿಕಾರಿಗಳು, ಬುದ್ಧಿಜೀವಿಗಳು, ರಾಜಕೀಯ ನಾಯಕರುಗಳಿಂದ ನಮ್ಮ ಭವಿಷ್ಯದ ಪೀಳಿಗೆ **ಅಭಿವೃದ್ಧಿ ಪೂರ್ವಕ ಶಿಕ್ಷಣ ಪಡೆಯುವ ಬದಲಿಗೆ, ದೇಶದ ಸಾರ್ವಭೌಮತ್ವ ಅರಿಯುವ ಶಿಕ್ಷಣದ ಬದಲಿಗೆ,** ಇಂದಿನ ಪರಿಸ್ಥಿತಿಗೆ ಬೇಕಿರುವ ಪಠ್ಯಕ್ರಮ ಓದುವ ಬದಲಿಗೆ, **ಜಾತಿ ಮತಗಳ ಸಂಕುಚಿತ ಭಾವನೆಗಳ ವಿಷಪ್ರಾಷಣವನ್ನು ಮಕ್ಕಳಿಗೆ ನೀಡುವ ಮೂಲಕ ಜಾತಿ ಆಧಾರದಲ್ಲಿ ಮೀಸಲಾತಿಗಳನ್ನು ರೂಪಿಸುತ್ತಾ ದೇಶ ಕಟ್ಟುವ ಭವ್ಯ ಪರಂಪರೆ ಸೃಷ್ಟಿಸುವ ಬದಲಿಗೆ, ಸಂಕುಚಿತ ಮನಸಿನ, ಸ್ವಾರ್ಥ ತುಂಬಿದ ಯುವಜನತೆಯನ್ನು ಇಂದಿನ ಶಿಕ್ಷಣ ವ್ಯವಸ್ಥೆ ತಯಾರು ಮಾಡುತ್ತಿರುವುದು ದೇಶದ ಪ್ರಗತಿಗೆ ಎಷ್ಟು ಮಾತ್ರ ಪೂರಕ**...?

ಪ್ರಾಥಮಿಕ ಹಂತದಿಂದಲೇ ರಾಷ್ಟ್ರೀಯತೆ, ವಿಜ್ಞಾನ, ದೇಶದ ಸಾರ್ವಭೌಮತ್ವಗಳ ಬಗ್ಗೆ ಅರಿಯದ ವಿದ್ಯಾರ್ಥಿಗಳು, **ನಮ್ಮ ದೇಶದ ಸಂಸ್ಕಾರ, ಸಂಸ್ಕೃತಿಗಳ ನೈಜತೆಯನ್ನು ತಿಳಿಸಿಕೊಡದ ಶಿಕ್ಷಣದಿಂದ, ದೇಶೀಯ ಜ್ಞಾನ, ವಿಜ್ಞಾನ, ಸುಜ್ಞಾನಗಳ ಬಗ್ಗೆ ತಿಳಿಸದೆ ಕೇವಲ ನಮ್ಮ ದೇಶವನ್ನು ಕೊಳ್ಳೆ ಹೊಡೆದವರಂತಹ ಅನಿಷ್ಟರ ನಕರಾತ್ಮಕ ವಿಷಯಗಳನ್ನು ನಮ್ಮ ಮಕ್ಕಳಿಗೆ ಸಣ್ಣ ವಯಸ್ಸಿನಿಂದಲೇ ತುಂಬಿದ ನಾವು ಅವರಿಂದ ಅಪೇಕ್ಷೆ ಪಡುವುದಾದರೂ** ಏನು...? ನಾವು ಬೆಳೆಸಿ ಪೋಷಿಸುತ್ತಿರುವ ಪೀಳಿಗೆಯಾದರೂ ಎಂತಹುದಾಗುತ್ತದೆ? ಮುಳ್ಳಿನ ಗಿಡಗಳನ್ನು ಪೋಷಿಸಿ ಬೆಳೆಸಿದ ಮೇಲೆ ನಮಗೆ ಸಿಗುವ ಫಲವಾದರೂ ಎಂತಹುದು...?

**ಅದಕ್ಕಾಗಿಯೇ....** > ಶಿಕ್ಷಣ ಪಡೆದು ವಿದ್ಯಾವಂತರಾದರು ಜ್ಞಾನವಂತರಾಗಲಿಲ್ಲ.

**> ಡಿಗ್ರಿಗಳನ್ನು ಪಡೆದು ಸಂಸಾರ ನಡೆಸುವ ಶಕ್ತಿ ಪಡೆದುಕೊಂಡರೇ ವಿನಃ, ಜೀವನದ ಅರ್ಥವನ್ನೇ ತಿಳಿದುಕೊಳ್ಳಲಿಲ್ಲ. > ಸ್ವಾರ್ಥ ತುಂಬಿದ ಮನಸ್ಸುಗಳಿಂದ ಕೌಟುಂಬಿಕ ಮೌಲ್ಯಗಳು ಕಳೆದುಹೋಗಿದೆ. > ವಿದ್ಯಾವಂತರಾದರೂ ಸಹ ಕುಟುಂಬದಲ್ಲಿನ ಸಂಬಂಧಗಳನ್ನು ಉಳಿಸಿ ಬೆಳೆಸಿಕೊಳ್ಳುವಲ್ಲಿ ವಿಫಲರಾಗುತ್ತಿರುವವರೇ ಹೆಚ್ಚು.**

**> ವಿದ್ಯಾವಂತ ಗಂಡು ಹೆಣ್ಣು ದಂಪತಿಗಳಾದರೂ ಸಹ 'ಅಹಂ'ನಿಂದ ಜೀವನದಲ್ಲಿ ಹೊಂದಾಣಿಕೆಯಿಲ್ಲದೆ, ದಿನೇ ದಿನೇ ಡೈವೋರ್ಸ್‌ಗಳ ಸಂಖ್ಯೆ ಹೆಚ್ಚಳ. > ಶಿಕ್ಷಣದಲ್ಲಿ ನೈತಿಕ ಮೌಲ್ಯಗಳ ಕೊರತೆಯಿಂದ ಹೆತ್ತವರು ಬೀದಿ ಪಾಲಾಗುತ್ತಿರುವ–ವೃದ್ಧಾಶ್ರಮಗಳಲ್ಲಿ ಆಸರೆ ಪಡೆಯುತ್ತಿರುವ ಸಂಖ್ಯೆ ಹೆಚ್ಚಾಗುತ್ತಲೇ ಇದೆ. > ಸಂಸ್ಕಾರವಿಲ್ಲದ ವಿದ್ಯಾವಂತರಿಂದ ದೇಶದ ಸಾಂಸ್ಕೃತಿಕ ಮೌಲ್ಯಗಳಿಗೆ ಬಲವಾದ ಪೆಟ್ಟು ಬೀಳುತ್ತಿದೆ. > ವಿದ್ಯಾವಂತ ವರ್ಗದಲ್ಲಿ ಜಾತಿ ಜಾತಿಗಳ ನಡುವೆ ಸೌಹಾರ್ದತೆ ಹೆಚ್ಚಾಗುವ ಬದಲಿಗೆ ಅಂತರ ಹೆಚ್ಚುತ್ತಿದೆ. ಇದು ದೇಶದ ಅಖಂಡತೆಗೆ ದೊಡ್ಡ ಶಾಪ ಆಗುತ್ತಿದೆ.**

**"ವಸುದೈವ ಕುಟುಂಬಕಂ"** ಎಂದು ಭೋದಿಸುತ್ತಿದ್ದ **ಶಿಕ್ಷಣ ಪದ್ಧತಿ ಮರುಸ್ಥಾಪನೆ ಆಗಬೇಕು, ಗುರು ಕುಲಗಳಲ್ಲಿ ನೀಡುತ್ತಿದ್ದ ಮೌಲ್ಯಾಧಾರಿತ ಶಿಕ್ಷಣ ಮರುಪ್ರತಿಷ್ಠೆ ಆಗಬೇಕು. ಸ್ವಾಭಿಮಾನಿ, ದೇಶಾಭಿಮಾನಿ, ಆತ್ಮ ಸ್ಥೈರ್ಯವುಳ್ಳ ಯುವಜನಾಂಗದ ಸೃಷ್ಟಿ ಆಗಬೇಕು**. ಸಾವಿರಾರು ವರ್ಷಗಳ ಹಿಂದೆಯೇ ನಮ್ಮ ಋಷಿ ಮುನಿಗಳು ಪ್ರಪಂಚಕ್ಕೆ ನೀಡಿದ್ದ ವಿಜ್ಞಾನದ ಪರಿಚಯ, ಆಯುರ್ವೇದ ಪದ್ಧತಿಗಳು, ಆಹಾರ ಪದ್ಧತಿಗಳು, ಕೌಟುಂಬಿಕ ಮೌಲ್ಯಗಳನ್ನುಳ್ಳ ಶಿಕ್ಷಣ ಮರುಸ್ಥಾಪನೆಯಾಗಿ ನಮ್ಮ ಯುವಜನತೆ ವಿಶ್ವ ಮಟ್ಟದಲ್ಲಿ ಆದರ್ಶಕರಾಗಿ ಶೋಭಿಸಬೇಕು. ವ್ಯಾಪಾರ, ವಾಣಿಜ್ಯ, ಕಲೆ, ಸಾಹಿತ್ಯ, ಸಂಸ್ಕೃತಿ, ವಿಜ್ಞಾನಗಳ ಅವಿಷ್ಕಾರಗಳು ಮನೆ ಮನೆಯಲ್ಲಿ, ಮನಸ್ಸು ಮನಸ್ಸುಗಳಲ್ಲಿ ತುಂಬಿ ಹರಿದು ವಿಶ್ವ ಮಾನ್ಯವಾಗಿದ್ದ ನಮ್ಮ ಕೌಟುಂಬಿಕ ವ್ಯವಸ್ಥೆ, ವಿಶ್ವಕ್ಕೆ ಭೋದಿಸಿದ್ದ ಅರ್ಥವ್ಯವಸ್ಥೆ, ಇತ್ಯಾದಿಗಳಿಂದ **ನಮ್ಮ ದೇಶ ವಿಶ್ವಮಾತೆಯಾಗಿ, ವಿಶ್ವಕ್ಕೆ ಆದರ್ಶವಾಗಿ ಸವಾಲುಗಳನ್ನು ಮೆಟ್ಟಿನಿಲ್ಲುವ ಸ್ವಾಭಿಮಾನಿ ಯುವಶಕ್ತಿಯಿಂದ ಕಂಗೊಳಿಸುವಂತಹ ಶಿಕ್ಷಣ ಪದ್ಧತಿ ಆದಷ್ಟು ಜಾಗ್ರತೆಯಾಗಿ ಬರಲೆಂದು** ಆಶಿಸುತ್ತಾ ಪ್ರತಿಯೊಬ್ಬ ಓದುಗರ ಕುಟುಂಬಕ್ಕೂ ಗೌರಿ ಗಣೇಶ ಹಬ್ಬದ ಹಾರ್ಧಿಕ ಶುಭಾಷಯಗಳನ್ನು ಕೋರುತ್ತಾ ಹಬ್ಬದ ಮೌಲ್ಯಗಳನ್ನರಿತು ಹಬ್ಬ ಆಚರಿಸಿ ಎಂದು ಪ್ರಾರ್ಥಿಸುವ,

**ರಾ ಪ ರವಿಶಂಕರ್,** ಅಧ್ಯಕ್ಷರು

# ಶ್ರೀ ವಾಸವಿ ಎಜುಕೇಷನ್ ಕೋ-ಆಪ್ ಸೊಸೈಟಿ ನಿಯಮಿತ

## ಸದಸ್ಯತ್ವಕ್ಕೆ ಮನವಿ


ಉದ್ದೇಶಿತ ಕಟ್ಟಡದ ವಿಹಂಗಮ ನೋಟ

ವ್ಯಾಪಾರ, ವಾಣಿಜ್ಯೋದ್ಯಮಗಳ ಮೂಲಕ ಸಮಾಜದಲ್ಲಿ ತನ್ನ ಅಸ್ತಿತ್ವವನ್ನು ಉಳಿಸಿ ಬೆಳೆಸಿಕೊಂಡಿರುವ ಆರ್ಯವೈಶ್ಯ ಸಮಾಜ ದಾನ-ಧರ್ಮ-ಸೇವಾ ಕಾರ್ಯಕ್ರಮಗಳ ಮೂಲಕ ನಾಗರೀಕ ಸಮಾಜದಲ್ಲಿ ಇಂದಿಗೂ ತನ್ನ ಕೀರ್ತಿ ಪ್ರತಿಷ್ಠೆಗಳನ್ನು ಉಳಿಸಿಕೊಂಡು ಬಂದಿದೆ. ರಾಜ್ಯಾದ್ಯಂತ ದೇವಾಲಯಗಳು, ಕಲ್ಯಾಣ ಮಂದಿರಗಳಂತಹ ಯೋಜನೆಗಳಿಗೆ ಪ್ರಾಶಸ್ತ್ಯ ನೀಡಿದ ನಮ್ಮ ಹಿರಿಯರು, ಇತರ ಸಮಾಜದವರಂತೆ ಗುಣಮಟ್ಟದ ಹಾಗೂ ಉನ್ನತ ಶಿಕ್ಷಣ ಸಂಸ್ಥೆಗಳ ನಿರ್ಮಾಣಕ್ಕೆ ಪ್ರಾಶಸ್ತ್ಯ ನೀಡಲಿಲ್ಲ.


ಉದ್ದೇಶಿತ ಕಟ್ಟಡದ ವಿಹಂಗಮ ನೋಟ

ಶಿಕ್ಷಣಕ್ಕೆ ಹಿಂದೆಗಿಂತಲೂ ಇಂದು ಪ್ರಾಮುಖ್ಯತೆ ಹೆಚ್ಚಿದೆ. ಸೇವಾ ಕ್ಷೇತ್ರಕ್ಕೆ ಸೀಮಿತವಾಗಿದ್ದ ಶಿಕ್ಷಣ ಸಂಸ್ಥೆಗಳು ಇಂದು ವಾಣಿಜ್ಯ ಮಯವಾಗಿದೆ. ಘನ ಸರ್ಕಾರಗಳ ಮೀಸಲಾತಿ ನಿಯಮಗಳು ಮುಂದುವರೆದ ಸಮಾಜದ ವಿದ್ಯಾರ್ಥಿಗಳ ಭವಿಷ್ಯಕ್ಕೆ ಪೆಟ್ಟುಕೊಟ್ಟಿದೆ. ಇಂತಹ ಪರಿಸ್ಥಿತಿಯಲ್ಲಿ ಭವಿಷ್ಯದ ಪೀಳಿಗೆಗಳ ಶಿಕ್ಷಣದ ಸವಾಲುಗಳ ಬಗ್ಗೆ ಮುಂದಾಲೋಚನೆ ಮಾಡದೇ ಹೋದಲ್ಲಿ ನಮ್ಮ ಸಮಾಜದ ಪ್ರತಿಭಾವಂತ ಬಡ/ಮಧ್ಯಮ ಕುಟುಂಬದ ವಿದ್ಯಾರ್ಥಿಗಳ ಭವಿಷ್ಯ ಎತ್ತ ಸಾಗಬಹುದುದೆಂದು ಯೋಚಿಸಿದರೆ ಪರಿಸ್ಥಿತಿ ನಡುಕ ಹುಟ್ಟಿಸುತ್ತದೆ. ಈಗಾಗಲೇ ನಮ್ಮ ಸಮಾಜ ಬಹಳಷ್ಟು ತಡ ಮಾಡಿದೆ, ಆದರೂ ಸಮಯ ಮೀರಿಲ್ಲ ಕರ್ನಾಟಕ ಆರ್ಯವೈಶ್ಯ ಮಹಾಸಭೆಯ ನೇತೃತ್ವದಲ್ಲಿ ಶಿಕ್ಷಣ ಸಂಸ್ಥೆಗಳನ್ನು ಕಟ್ಟುತ್ತಾ ಉತ್ತಮವಾದ, ಅತ್ಯುತ್ತಮವಾದ ಅಂತರಾಷ್ಟ್ರೀಯ ಗುಣ ಮಟ್ಟದ ಶಿಕ್ಷಣ ಸಂಸ್ಥೆಗಳನ್ನು ರಾಜ್ಯದ ನಾನಾ ಭಾಗಗಳಲ್ಲಿ ನಿರ್ಮಾಣ ಮಾಡುವುದರೊಂದಿಗೆ ಶಿಕ್ಷಣ ಕ್ಷೇತ್ರದಲ್ಲಿ ಬಲವಾದ ಹೆಜ್ಜೆ ಇಟ್ಟು ಹೊಸ ಕ್ರಾಂತಿ ಮಾಡೋಣ, ನಮ್ಮ ಪ್ರತಿಭಾವಂತ ವಿದ್ಯಾರ್ಥಿಗಳ ಉಜ್ವಲ ಭವಿಷ್ಯಕ್ಕೆ ನಾಂದಿ ಹಾಡಬೇಕಾದ ಜವಾಬ್ದಾರಿ ನಮ್ಮದಲ್ಲವೇ?


ಸಹಕಾರ ಇಲಾಖೆ ಅಪರ ನಿಬಂಧಕರಿಂದ ಪ್ರಮಾಣ ಪತ್ರ ಸ್ವೀಕರಿಸುತ್ತಿರುವ ಮಾನ್ಯ ಅಧ್ಯಕ್ಷರು

ಇಂತಹ ಮಹತ್ತರ ಉದ್ದೇಶಗಳನ್ನಿಟ್ಟುಕೊಂಡು ಸ್ಥಾಪಿತವಾಗಿರುವ ಸಂಸ್ಥೆ ಶ್ರೀ ವಾಸವಿ ಎಜುಕೇಶನ್ ಕೋ ಆಪರೇಟಿವ್ ಸೊಸೈಟಿ ನಿಯಮಿತ. ಈ ಸಹಕಾರ ಸಂಘಕ್ಕೆ ಶೇರುದಾರರನ್ನು ನೋಂದಾಯಿಸಿಕೊಂಡು ಶೇರು ಹಣವನ್ನು ಶಿಕ್ಷಣ ಸಂಸ್ಥೆಗಳ ನಿರ್ಮಾಣಕ್ಕೆ ವಿನಿಯೋಗಿಸಿ ನೈತಿಕ ಶಿಕ್ಷಣ ನೀಡುವ, ಗುಣಮಟ್ಟದ ಶಿಕ್ಷಣ ಸಂಸ್ಥೆಗಳನ್ನು ನಿರ್ಮಾಣ ಮಾಡಲು ನಿಮ್ಮ ಸಹಕಾರ ಹಸ್ತ ನೀಡಿ.

## ನೀವು ಏಕೆ ಸದಸ್ಯರಾಗ ಬೇಕು??

1. ವಿಶ್ವ ದರ್ಜೆಯ ಶಿಕ್ಷಣ ಸಂಸ್ಥೆಗಳ ನಿರ್ಮಾಣದಲ್ಲಿ ತಾವು ಷೇರುದಾರರಾಗಿ ಭಾಗವಹಿಸಲು ಅತ್ಯುತ್ತಮ ಅವಕಾಶ
2. ನಿಮ್ಮ ಮಕ್ಕಳು/ ಮೊಮ್ಮಕ್ಕಳಿಗೆ ರಿಯಾಯಿತಿ ದರದಲ್ಲಿ ಉತ್ತಮ ಶಿಕ್ಷಣ ಪಡೆಯಲು ಅವಕಾಶ.
3. ಸದಸ್ಯರ ಕುಟುಂಬದವರಿಗೆ ಕೆಲಸದಲ್ಲಿ ಆದ್ಯತೆ
4. ಸಂಘವು ಪ್ರಾರಂಭಿಸಿರುವ ಯಾವುದಾದರೂ ಒಂದು ಶೈಕ್ಷಣಿಕ ಕೋರ್ಸ್ ಗಳಿಗೆ ಶಿಫಾರಸು ಮಾಡುವ ಅವಕಾಶವಿರುತ್ತದೆ
5. ಪ್ರಾಥಮಿಕ ಶಿಕ್ಷಣದಿಂದ ಉನ್ನತ ಶಿಕ್ಷಣ ಸಂಸ್ಥೆಗಳ ನಿರ್ಮಾಣದ ಗುರಿ.
6. ಉತ್ತಮ ಗುಣಮಟ್ಟದ ವಸತಿ ಶಾಲೆ ಹಾಗೂ ಸಾಮಾನ್ಯ ಶಾಲೆ.
7. ಶಿಕ್ಷಣದ ಜೊತೆ ಜೊತೆಗೆ ಕ್ರೀಡೆ, ಸಾಂಸ್ಕೃತಿಕ ಕಲೆಗಳ ತರಬೇತಿ.
8. ಹಂತ ಹಂತದಲ್ಲಿ ರಾಜ್ಯಾದ್ಯಂತ ನಮ್ಮ ಶಿಕ್ಷಣ ಸಂಸ್ಥೆಗಳನ್ನು ಅಭಿವೃದ್ಧಿಪಡಿಸುವುದು.
9. ಸದಸ್ಯತ್ವ ಷೇರು ಮೊತ್ತ ಕನಿಷ್ಠ ಕೇವಲ ರೂ.11,100-00/-, ಹೆಚ್ಚುವರಿ ಶೇರುಗಳನ್ನು ಪಡೆದುಕೊಳ್ಳಲು ಅವಕಾಶವಿದೆ.
10. ಅಭಿವೃದ್ಧಿ ಹೊಂದಿದ ನಂತರ ಶಿಕ್ಷಣ ಸಂಸ್ಥೆಗಳಿಂದ ಬರುವ ಲಾಭದ ಮೊತ್ತವನ್ನು ಲಾಭಾಂಶ ರೂಪದಲ್ಲಿ ಶೇರುದಾರರಿಗೆ ಹಂಚಿಕೆ.

ಅಪ್ಲಿಕೇಶನ್‌ಗಾಗಿ QR ಕೋಡನ್ನು ಸ್ಕ್ಯಾನ್‌ಮಾಡಿ

**ಷೇರಿನ ಮೊತ್ತವನ್ನು ಕಳುಹಿಸಿಕೊಡಲು ಈ ಕೆಳಗಿನ ಬ್ಯಾಂಕ್ ಖಾತೆಯನ್ನು ಉಪಯೋಗಿಸಿಕೊಳ್ಳಿ**

**ACCOUNT HOLDER NAME**
**SREE VASAVI EDUCATION CO OP SOCIETY LTD.,**
**ACCOUNT NUMBER - 1001005013163**
**IFSC CODE- KKBK0MSCMB1**
**BANK NAME**
**THE MYSORE SILK CLOTH MERCHANT CO-OPERATIVE BANK LTD.,**

**ನೀವು ಸದಸ್ಯರಾಗಿ ನಿಮ್ಮ ಸ್ನೇಹಿತರನ್ನು ಸದಸ್ಯರನ್ನಾಗಿಸಿ**

**ಎಲ್ಲಾ ಸಾಧಿಸಲು ನಿಮ್ಮ ಸಹಕಾರ ಬೇಕು-ಸದಸ್ಯತ್ವವು ಬೇಕು**

ಆರ್ ಪಿ ರವಿಶಂಕರ್ ಅಧ್ಯಕ್ಷರು < ಆಡಳಿತ ಮಂಡಳಿ > ಮಾನಂದಿ ಸುರೇಶ್ ಉಪಾಧ್ಯಕ್ಷರು

# ವಾಸವಿ ಅಕಾಡಮಿ 5ನೇ ತಂಡದ ಉದ್ಘಾಟನೆ


ಜ್ಯೋತಿ ಬೆಳಗಿಸುತ್ತಿರುವ ಗಣ್ಯರು

ಆರ್ಥಿಕವಾಗಿ ಹಿಂದುಳಿದ ಪ್ರತಿಭಾವಂತ ವಿದ್ಯಾರ್ಥಿಗಳಿಗೂ ಸಹ ಯು.ಪಿ.ಎಸ್.ಸಿ, ಐ.ಎ.ಎಸ್ ಪರೀಕ್ಷೆಗಳನ್ನು ಬರೆಯಲು ಅನುಕೂಲ ಮಾಡಿಕೊಡಲು ಉದಯಿಸಿದ ಸಂಸ್ಥೆಯೇ **ವಾಸವಿ ಅಕಾಡೆಮಿ.** ಈಗಾಗಲೇ 4 ತಂಡಗಳಿಗೆ ಉತ್ತಮ ಮಾರ್ಗದರ್ಶನ ನೀಡಿ ವಿದ್ಯಾರ್ಥಿಗಳ ಉಜ್ವಲ ಭವಿಷ್ಯಕ್ಕೆ ನಾಂದಿಯಾಗಿದೆ.

2024ರ ಯು.ಪಿ.ಎಸ್.ಸಿ ಪರೀಕ್ಷೆಗಳನ್ನು ಬರೆಯಲು ಆಸಕ್ತ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿತ್ತು. ಒಂದು ಸಾವಿರಕ್ಕೂ ಮೀರಿದ ವಿದ್ಯಾರ್ಥಿಗಳು ಸಂಪರ್ಕಿಸಿದರು, ಪ್ರತೀ ವರ್ಷದಂತೆ ಈ ವರ್ಷವೂ ಪ್ರವೇಶ ಪರೀಕ್ಷೆಯನ್ನು ಏರ್ಪಡಿಸಿ 17 ವಿದ್ಯಾರ್ಥಿ/ವಿದ್ಯಾರ್ಥಿನಿಯರನ್ನು ಮಾತ್ರ ಆಯ್ಕೆ ಮಾಡಿಕೊಂಡಿದ್ದು, ದಕ್ಷಿಣ ಭಾರತದ ಹೆಸಾಂತ ಶಿಕ್ಷಣ ಸಂಸ್ಥೆ **ಇನ್‌ಸೈಟ್ ಐ.ಎ.ಎಸ್** ಜೊತೆ ಮಾರ್ಗದರ್ಶನ ನೀಡುವ ತರಗತಿಗಳನ್ನು ನಡೆಸಲು ಒಪ್ಪಂದ ಮಾಡಿಕೊಳ್ಳಲಾಯಿತು. ಜಂಟಿ ಆಶ್ರಯದಲ್ಲಿ ಸಂಪೂರ್ಣ ಉಚಿತ ತರಬೇತಿ ನೀಡುವ ತರಗತಿಗಳನ್ನು ದಿನಾಂಕ 3-9-2023ರ ಭಾನುವಾರ ಮಹಾಸಭೆಯ ಸಭಾ ಕೊಠಡಿಯಲ್ಲಿ ಮಧ್ಯಾಹ್ನ 3.30 ಘಂಟೆಗೆ ವಾಣಿಜ್ಯ ಇಲಾಖೆಯ ಜಂಟಿ ಆಯುಕ್ತರು, ಮತ್ತು 2016ರ ಯು.ಪಿ.ಎಸ್.ಸಿ ಪರೀಕ್ಷೆಯಲ್ಲಿ ದೇಶಕ್ಕೆ ಪ್ರಥಮರಾಗಿದ್ದ **ಶ್ರೀಮತಿ ನಂದಿನಿ ಐ.ಎ.ಎಸ್** ಹಾಗೂ ಬಿ.ಬಿ.ಎಂ.ಪಿಯ ವಿಶೇಷ ಆಯುಕ್ತರಾಗಿರುವ **ಶ್ರೀ ಡಾ॥ ದೀಪಕ್ ಐ.ಎ.ಎಸ್** ರವರ ಅಮೃತಹಸ್ತದಿಂದ ವಾಸವಿ ಅಕಾಡೆಮಿಯ 5ನೇ ತಂಡವನ್ನು ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸಿ, 5ನೇ ತಂಡದ ವಿದ್ಯಾರ್ಥಿಗಳಿಗೆ ಶುಭ ಹಾರೈಸಲಾಯಿತು.

ವಾಸವಿ ಅಕಾಡೆಮಿಯ ಮುಖ್ಯ ಸಲಹೆಗಾರರಾದ **ಶ್ರೀ ಜಿ.ವಿ ಗೋಪಾಲ ರಾವ್ ಐ.ಆರ್.ಎಸ್‌ರವರು** ವಾಸವಿ ಅಕಾಡೆಮಿಯ ಉದ್ದೇಶಗಳ ಬಗ್ಗೆ ತಿಳಿಸಿ, ಶುಭಕೋರಿದರು.

LAST DATE FOR APPLICATION 30.10.2023

# ಲ್ಯಾಪ್‌ಟಾಪ್ ಯೋಜನೆ

## ಉನ್ನತ ಶಿಕ್ಷಣದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಮಾತ್ರ

ವೃತ್ತಿಪರ ಕೋರ್ಸ್‌ಗಳಲ್ಲಿ (PROFESSIONAL COURSE) ಅಂದರೇ ಎಂ.ಬಿ.ಎ (M B A), ಎಂ.ಸಿ.ಎ (M C A), ಬಿ.ಸಿ.ಎ (B C A) ಎಂ.ಎಸ್ಸಿ ಕಂಪ್ಯೂಟರ್ ( M Sc COMPUTER SCINCE), ಬಿ.ಎಸ್ಸಿ ಕಂಪ್ಯೂಟರ್ (B Sc COMPUTER SCIENCE), ಡಿಪ್ಲೋಮಾ ಇನ್ ಕಂಪ್ಯೂಟರ್ ( DIPLOMA IN COMPUTERS), ಬಿ.ಇ (BE), ಎಂ.ಟೆಕ್ (M TECH), ಗಳಲ್ಲಿ ವ್ಯಾಸಂಗ ಮಾಡುತ್ತಿರುವ **ಪ್ರತಿಭಾವಂತರು ಮತ್ತು ಆರ್ಥಿಕವಾಗಿ ಹಿಂದುಳಿದಿರುವ** ಕಾಲೇಜು ವಿದ್ಯಾರ್ಥಿಗಳ ಶಿಕ್ಷಣದ ಅನುಕೂಲಕ್ಕಾಗಿ ಮಹಾಸಭೆಯ ನಿಬಂಧನೆಗಳನ್ವಯ ಲ್ಯಾಪ್‌ಟಾಪ್‌ಗಳನ್ನು ನೀಡುವ ವಿನೂತನ ಯೋಜನೆಯನ್ನು ಪರಿಚಯಿಸುತ್ತಿದೆ.

### ಈ ಯೋಜನೆಯ ಪ್ರಯೋಜನ ಪಡೆಯಲು ಇಚ್ಚಿಸುವ ವಿದ್ಯಾರ್ಥಿಗಳು



- ಫಲಾನುಭವಿ ವಿದ್ಯಾರ್ಥಿಗಳ ಪೋಷಕರು ಕಡ್ಡಾಯವಾಗಿ ಮಹಾಸಭೆಯ ಸದಸ್ಯರಾಗಿರಬೇಕು.
- ವಿದ್ಯಾರ್ಥಿಗಳು ಕರ್ನಾಟಕ ರಾಜ್ಯದ ನಿವಾಸಿಗಳಾಗಿರಬೇಕು.
- ಕರ್ನಾಟಕದ ಯಾವುದೇ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಾಗಿರಬೇಕು.
- ಹಿಂದಿನ ಪರೀಕ್ಷೆಯಲ್ಲಿ ಕನಿಷ್ಠ ಶೇ **60**ರಷ್ಟು ಅಂಕಗಳಿಸಿರಬೇಕು.
- ಸ್ಥಳೀಯ ಆರ್ಯವೈಶ್ಯ ಸಂಘ/ಸದರಿ ಜಿಲ್ಲೆಯ ಮಹಾಸಭೆ ಕಾರ್ಯಕಾರಿ ಸಮಿತಿ ಸದಸ್ಯರು/ಜಿಲ್ಲಾ ಸಮಿತಿ ಅಧ್ಯಕ್ಷ/ಕಾರ್ಯದರ್ಶಿಗಳ ಧೃಡೀಕರಣವನ್ನು ನೀಡಬೇಕಿರುವುದು ಕಡ್ಡಾಯವಾಗಿರುತ್ತದೆ.
- **ಯಾವುದೇ ಕಾರಣ ನೀಡದೆ ಅರ್ಜಿಗಳನ್ನು ಪುರಸ್ಕರಿಸುವ–ತಿರಸ್ಕರಿಸುವ ಅಧಿಕಾರ ಕರ್ನಾಟಕ ಆರ್ಯವೈಶ್ಯ ಮಹಾಸಭೆಯದ್ದಾಗಿರುತ್ತದೆ.**
- **ಲ್ಯಾಪ್‌ಟಾಪ್ ಪಡೆಯಲು ಅರ್ಹತೆ ಪಡೆದ ವಿದ್ಯಾರ್ಥಿಗಳಿಗೆ, ಕೊಡಮಾಡಲಿರುವ ಲ್ಯಾಪ್‌ಟಾಪ್ ಮಾಡೆಲ್ ಬಗ್ಗೆ ತಿಳಿಸಲಾಗುತ್ತದೆ.**

ಅರ್ಜಿಗಳನ್ನು **online** ನಲ್ಲಿ ಭರ್ತಿ ಮಾಡಲು ಮಾತ್ರ ಅವಕಾಶವಿರುತ್ತದೆ **online** ಅರ್ಜಿಗಳಿಗಾಗಿ **www.kavms.com** ಸಂಪರ್ಕಿಸಿ

**ವಿಶೇಷ ಸೂಚನೆ : ನೇರವಾಗಿ ಬಂದ ಅರ್ಜಿಗಳನ್ನು ಪುರಸ್ಕರಿಸಲಾಗುವುದಿಲ್ಲ**

**ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನಾಂಕ: 30–10–2023**

**ಒಬ್ಬ ವಿದ್ಯಾರ್ಥಿಯು ಮಹಾಸಭೆಯಿಂದ ಒಂದು ರೀತಿಯ ಅನುಕೂಲವನ್ನು ಪಡೆದುಕೊಳ್ಳಲು ಅವಕಾಶವನ್ನು ಮಾಡಿಕೊಡಲಾಗಿದೆ.**
**ಅವುಗಳೆಂದರೆ ಲ್ಯಾಪ್‌ಟಾಪ್/ ವಿದ್ಯಾರ್ಥಿಮಿತ್ರ ಸಾಲ ಯೋಜನೆ/ ಹಾಸ್ಟೆಲ್‌ನಲ್ಲಿ ಉಚಿತ ಸೀಟ್**

## ಕರ್ನಾಟಕದ ಆರ್ಯವೈಶ್ಯ ವಿದ್ಯಾರ್ಥಿಗಳಿಗೆ 2023–24ರ ಸಾಲಿನ ವಿಶೇಷ ಯೋಜನೆ

### ಆರ್ಥಿಕವಾಗಿ ಹಿಂದುಳಿದ ಪ್ರತಿಭಾವಂತ ವಿದ್ಯಾರ್ಥಿಗಳ ಆಶಾಕಿರಣ

# ಆರ್ಯವೈಶ್ಯ ವಿದ್ಯಾರ್ಥಿಮಿತ್ರ

LAST DATE FOR APPLICATION 30.10.2023

> ನೀವು ಪ್ರತಿಭಾವಂತ ವಿದ್ಯಾರ್ಥಿಗಳೇ? > ನಿಮಗೆ ವೃತ್ತಿಪರ ಕೋರ್ಸ್ ಮಾಡಲು ಆರ್ಥಿಕವಾಗಿ ಸಮಸ್ಯೆ ಇದೆಯೇ? > ಬ್ಯಾಂಕುಗಳಿಂದ ಶಿಕ್ಷಣ ಸಾಲ ಪಡೆಯಲು ಆಗಲಿಲ್ಲವೇ?

**ನಿಮ್ಮ ಶಿಕ್ಷಣ ಮುಂದುವರಿಸಲು ನಿಮಗೆ ಸಹಾಯ ನೀಡಲು ನಿಮ್ಮ ಜೊತೆಗಿದೆ–ನಿಮ್ಮ ಮಹಾಸಭೆ.**

ಬಡತನದಲ್ಲಿ ಹುಟ್ಟುವುದು ನಮ್ಮ ತಪ್ಪಲ್ಲ–ಆದರೆ ಬಡತನದಲ್ಲಿಯೇ ಸಾಯವುದು ಮಾತ್ರ ನಮ್ಮ ತಪ್ಪು, ಬಡತನ ನಮ್ಮ ಪ್ರತಿಭಾವಂತ ವಿದ್ಯಾರ್ಥಿಗಳ ಉನ್ನತ ಶಿಕ್ಷಣಕ್ಕೆ ಶಾಪವಾಗಬಾರದು, ಪ್ರತಿಭೆಗಳು ಸೊರಗಲೂಬಾರದು. ಮನೆಯಲ್ಲಿ ಒಬ್ಬರು ವಿದ್ಯಾವಂತರಾದರೆ, ಅವರ ಮೂಲಕ ಕುಟುಂಬವೇ ಆರ್ಥಿಕವಾಗಿ ಸದೃಢವಾಗಬೇಕೆಂಬ ಉನ್ನತ ಧ್ಯೇಯೋದ್ದೇಶಗಳೊಂದಿಗೆ ಕರ್ನಾಟಕ ಆರ್ಯವೈಶ್ಯ ಮಹಾಸಭಾ ಸಮಾಜದ ಆರ್ಥಿಕವಾಗಿ ತೊಂದರೆಯಲ್ಲಿರುವ ವೃತ್ತಿಪರ ಕೋರ್ಸುಗಳಲ್ಲಿ ಅಂದರೆ, ಇಂಜಿನಿಯರಿಂಗ್, ವೈದ್ಯಕೀಯ, ಕಾನೂನು ಕೋರ್ಸುಗಳಲ್ಲಿ ಈಗಾಗಲೇ ವ್ಯಾಸಂಗ ಮಾಡುತ್ತಿರುವ ಪ್ರತಿಭಾವಂತ ಬಡ ಆರ್ಯವೈಶ್ಯ ವಿದ್ಯಾರ್ಥಿಗಳಿಗೆ ಕೋರ್ಸ್ ಆರಂಭದಿಂದ ಕೊನೆಯವರೆವಿಗೂ ಕಾಲೇಜಿಗೆ ಪಾವತಿ ಮಾಡಬೇಕಿರುವ ಪೂರ್ಣ ಫೀ ಹಣವನ್ನು ಅಥವಾ ಗರಿಷ್ಠ 1,00,000–00(ಒಂದು ಲಕ್ಷ ರೂಪಾಯಿಗಳು ಮಾತ್ರ)ಗಳನ್ನು ಬಡ್ಡಿ ರಹಿತ ಸಾಲದ ರೂಪದಲ್ಲಿ ಮಹಾಸಭೆಯ ಷರತ್ತುಗಳನ್ವಯ ಕೊಡಿಸಲಾಗುತ್ತದೆ.

### ಅರ್ಹತೆಗಳು

- ಫಲಾನುಭವಿ ವಿದ್ಯಾರ್ಥಿಗಳ ಪೋಷಕರು ಕಡ್ಡಾಯವಾಗಿ ಮಹಾಸಭೆಯ ಸದಸ್ಯರಾಗಿರಬೇಕು.
- ಯಾವುದೇ ಬೇರೆ ಸಂಘ/ಸಂಸ್ಥೆಗಳಿಂದ/ಬ್ಯಾಂಕುಗಳಿಂದ, ಯಾವುದೇ ರೀತಿಯ ವಂತಿಗೆ/ಸಾಲ ಪಡೆದುಕೊಂಡಿರಬಾರದು.
- ಸರ್ಕಾರದ ಕೋಟಾದಡಿ ಸೀಟು ಪಡೆದಿರುವ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಮಾತ್ರ ಈ ಯೋಜನೆ ಅನ್ವಯವಾಗುತ್ತದೆ.
- ಪ್ರತೀ ಅರೆ/ವಾರ್ಷಿಕ ಪರೀಕ್ಷೆಗಳಲ್ಲಿ ಕನಿಷ್ಟ ಪ್ರಥಮ ದರ್ಜೆಯಲ್ಲಿ (FIRST CLASS) ಉತ್ತೀರ್ಣರಾಗಿರಬೇಕು. ತಪ್ಪಿದಲ್ಲಿ ಸೌಲಭ್ಯವನ್ನು ನಿಲ್ಲಿಸಲಾಗುತ್ತದೆ.
- **ಕರ್ನಾಟಕ ರಾಜ್ಯದಲ್ಲಿಯೇ ಎರಡನೇ ಪಿ.ಯು.ಸಿ ವರೆವಿಗೂ ವ್ಯಾಸಂಗ ಮಾಡಿದ ವಿದ್ಯಾರ್ಥಿಗಳು ಮಾತ್ರ ಈ ಯೋಜನೆಯಲ್ಲಿ ಪಾಲ್ಗೊಳ್ಳಲು ಅವಕಾಶವಿದೆ.**
- ಸಹಕಾರ ಸಂಘಗಳ ಮೂಲಕ ಬಡ್ಡಿರಹಿತ ಸಾಲ ಸೌಲಭ್ಯ ಮಾಡಿಕೊಡಲಾಗುತ್ತದೆ.
- ವಿದ್ಯಾರ್ಥಿಗಳ ಕೋರ್ಸು ಮುಗಿದ **6** ತಿಂಗಳ ನಂತರ ಗರಿಷ್ಠ **36** ತಿಂಗಳ ಒಳಗಾಗಿ ಸಾಲದ ಮೊತ್ತವನ್ನು ಕಂತುಗಳಲ್ಲಿ ಪೂರ್ಣವಾಗಿ ಪಾವತಿ ಮಾಡಬೇಕಾಗುತ್ತದೆ.
- ಸ್ಥಳೀಯ ಆರ್ಯವೈಶ್ಯ ಸಂಘಗಳ/ಮಹಾಸಭಾ ನಿರ್ದೇಶಕರ ಅನುಮತಿ ಪತ್ರ ಕಡ್ಡಾಯ.
- ಈ ಯೋಜನೆಯಲ್ಲಿ ಸಹಕಾರ ಕೋರಿ ಮಹಾಸಭೆಗೆ ಬಂದಿರುವ ಅರ್ಜಿಗಳನ್ನು ಪರಿಶೀಲಿಸಿ, ಅರ್ಜಿಗಳನ್ನು ಊರ್ಜಿತ/ಅನೂರ್ಜಿತಗೊಳಿಸುವ ಪೂರ್ಣ ಅಧಿಕಾರವು ಕರ್ನಾಟಕ ಆರ್ಯವೈಶ್ಯ ಮಹಾಸಭೆಗೆ ಇರುತ್ತದೆ ಮತ್ತು ಯಾವುದೇ ಸಂದರ್ಭದಲ್ಲಿ ಮಹಾಸಭೆಯ ಯೋಜನೆಯನ್ನು ಹಿಂಪಡೆಯುವ ಅಧಿಕಾರವನ್ನು ಮಹಾಸಭೆ ಹೊಂದಿರುತ್ತದೆ.
- ಕರ್ನಾಟಕ ಆರ್ಯವೈಶ್ಯ ಮಹಾಸಭೆಯ ಅಧಿಕೃತ ವೆಬ್‌ಸೈಟ್ **www.kavms.com** ಮೂಲಕ **online** ಅರ್ಜಿಗಳನ್ನು, ಸಲ್ಲಿಸಲು **ಕೊನೆಯ ದಿನಾಂಕ 30–10–2023**
- **ಹೊರದೇಶದಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಈ ಯೋಜನೆ ಅನ್ವಯವಾಗುವುದಿಲ್ಲ.**
- **ಯಾವುದೇ ವಿಶ್ವವಿದ್ಯಾನಿಲಯದಿಂದ ಅಂಗೀಕೃತ ಕೋರ್ಸುಗಳಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ಮಾತ್ರ ಅರ್ಜಿ ಸಲ್ಲಿಸಲು ಅವಕಾಶವಿರುತ್ತದೆ.**
- **ಒಂದು ಕುಟುಂಬದ ಇಬ್ಬರು ವಿದ್ಯಾರ್ಥಿಗಳು ಏಕಕಾಲದಲ್ಲಿ ಯೋಜನೆಯಲ್ಲಿ ಪಾಲ್ಗೊಳ್ಳಲು ಅವಕಾಶವಿರುವುದಿಲ್ಲ.**
- **ಯೋಜನೆಗೆ ಸಂಭಂದಿಸಿದ ನಿಯಮ/ನಿಬಂಧನೆಗಳನ್ನು ಆಗಿಂದ್ದಾಗ್ಗೆ ಪರಿಷ್ಕರಿಸುವ ಅಧಿಕಾರ ಮಹಾಸಭೆಗೆ ಇರುತ್ತದೆ.**
- ಯಾವುದೇ ವಿದ್ಯಾರ್ಥಿಗಳು/ಪೋಷಕರು ತಪ್ಪು ಮಾಹಿತಿಗಳನ್ನು ನೀಡಿ ಈ ಯೋಜನೆಯಿಂದ ಸೌಲಭ್ಯ ಪಡೆದಿದ್ದಾರೆ ಎಂದು ತಿಳಿದು ಬಂದಲ್ಲಿ ಅಂತಹ ವಿದ್ಯಾರ್ಥಿಗಳಿಗೆ ನೀಡಿರುವ ಸಾಲದ ಮೊತ್ತವನ್ನು ಬ್ಯಾಂಕ್ ಅಥವಾ ಸಹಕಾರ ಸಂಘದ ಬಡ್ಡಿಯೊಂದಿಗೆ ಕೂಡಲೇ ವಾಪಸ್ಸು ಪಡೆಯಲಾಗುತ್ತದೆ ಮತ್ತು ಅಂತಹ ವಿದ್ಯಾರ್ಥಿಗಳ ಮತ್ತು ಪೋಷಕರ ಹೆಸರು ಮತ್ತು ಫೋಟೊವನ್ನು ಮಹಾಸಭೆಯ ವಾರ್ತಾಪತ್ರದಲ್ಲಿ ಪ್ರಕಟಿಸಲಾಗುತ್ತದೆ.

LAST DATE FOR APPLICATION 15.10.2023

# ರಾಜ್ಯಮಟ್ಟದ ಪ್ರತಿಭೋತ್ಸವ-2023

## ಈ ಬಾರಿ ತುಮಕೂರು ನಗರದಲ್ಲಿ

## ಕರ್ನಾಟಕ ರಾಜ್ಯ ಆರ್ಯವೈಶ್ಯ ಪ್ರತಿಭಾವಂತ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ - ಆನ್‌ಲೈನ್‌ನಲ್ಲಿ

ಆತ್ಮೀಯ ಕುಲಬಾಂಧವರೇ,

ಈ ವರ್ಷದ ಪರೀಕ್ಷೆಗಳಲ್ಲಿ ಎಸ್ ಎಸ್ ಎಲ್ ಸಿ , 2ನೇ ಪಿ ಯು ಸಿ, ಡಿಗ್ರಿ ಹಾಗು ಉನ್ನತ ಪರಿಕ್ಷೆಗಳಲ್ಲಿ ಅತ್ಯುತ್ತಮ ಅಂಕಗಳನ್ನು ಪಡೆದು ಸಮಾಜದ ಕೀರ್ತಿಯನ್ನು ಬೆಳಗಿರುವ ಸಮಸ್ತ ವಿದ್ಯಾ ಮಾಣಿಕ್ಯಗಳನ್ನು ಕರ್ನಾಟಕ ರಾಜ್ಯದ ಸಮಸ್ತ ಆರ್ಯವೈಶ್ಯ ಬಂಧುಗಳ ಪರವಾಗಿ ಹೃದಯ ಪೂರ್ವಕವಾಗಿ ಅಭಿನಂದಿಸುತ್ತೇವೆ.

ಶ್ರದ್ದೆ, ಆತ್ಮ ವಿಶ್ವಾಸ, ಸತತ ಪರಿಶ್ರಮಗಳಿಂದ 2022–23 ನೇ ಶೈಕ್ಷಣಿಕ ಸಾಲಿನಲ್ಲಿ ನಡೆದ ಅಂತಿಮ ಪರೀಕ್ಷೆಗಳಲ್ಲಿ ಉತ್ತಮೋತ್ತಮ ಅಂಕಗಳನ್ನು ಪಡೆದ ವಿದ್ಯಾ ಮಾಣಿಕ್ಯಗಳನ್ನು ರಾಜ್ಯ ಮಟ್ಟದಲ್ಲಿ , ರಾಜ್ಯ ನಾಯಕರ, ರಾಜ್ಯದ ಸಮುದಾಯದ ಸಮ್ಮುಖದಲ್ಲಿ ಅಭೂತಪೂರ್ವವಾಗಿ ಅಭಿನಂಧಿಸಲು ಮಹಾಸಭೆ ನಿರ್ಧಸಿದೆ.

ಮಹಾಸಭೆ ವತಿಯಿಂದ ರಾಜ್ಯದ ನಾನಾ ಭಾಗಗಳಲ್ಲಿ ಅತ್ಯಂತ ಅಮೋಘವಾಗಿ ನಡೆದಿರುವ ಹಾಗೂ ಸಹಸ್ರಾರು ಕುಲಭಾಂದವರ ಮೆಚ್ಚುಗೆಗೆ ಪಾತ್ರವಾಗಿರುವ ರಾಜ್ಯ ಮಟ್ಟದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದ ವೈಭವ ಪ್ರತಿಯೊಬ್ಬರ ನಿರೀಕ್ಷೆಗೆ ಮೀರಿದ್ದಾಗಿರುತ್ತದೆ.

ಅಂತಹ ಅವರ್ಣನೀಯ ವರ್ಣರಂಜಿತ 13ನೇ ಪ್ರತಿಭಾ ಪುರಸ್ಕಾರದ ಕಾರ್ಯಕ್ರಮವನ್ನು ತುಮಕೂರು ನಗರದಲ್ಲಿ ನಡೆಸಲು ತೀರ್ಮಾನಿಸಲಾಗಿದೆ. ಸಾಧನೆ ಮೆರೆದ ವಿದ್ಯಾರ್ಥಿಗಳಿಗೆ ಜೀವನದಲ್ಲಿ ದೊರೆಯಬಹುದಾದ ಏಕೈಕ ಅಪೂರ್ವ ಅವಕಾಶ

### ಸೂಚನೆಗಳು

★ 2022–23 ಶೈಕ್ಷಣಿಕ ವರ್ಷದಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಮಾತ್ರ ಪ್ರತಿಭಾ ಪುರಸ್ಕಾರ ಅನ್ವಯವಾಗುತ್ತದೆ.

★ S.S.L.C ಮತ್ತು PUC ಯಲ್ಲಿ ಶೇ. 90ಕ್ಕಿಂತಲೂ ಹೆಚ್ಚು ಅಂಕ ಪಡೆದಿರುವವರು ಮತ್ತು ಅಂತಿಮ ಡಿಗ್ರಿ ಮತ್ತು ಇಂಜನಿಯರಿಂಗ್, ವೈದ್ಯಕೀಯ, ಸ್ನಾತಕೋತ್ತರ ಪದವಿ ಇತ್ಯಾದಿ ಪರೀಕ್ಷೆಗಳಲ್ಲಿ ಡಿಸ್ಟಿಂಕ್ಷನ್ ಪಡೆದವರು.

★ ಯಾವುದೇ ವಿಶ್ವವಿದ್ಯಾನಿಲಯಗಳಿಂದ ಪಿ.ಹೆಚ್.ಡಿ ಪಡೆದವರು


★ ಯಾವುದೇ ವಿಶ್ವವಿದ್ಯಾನಿಲಯಗಳಿಂದ ರ್‍ಯಾಂಕ್ ಪಡೆದಿರುವ ವಿದ್ಯಾರ್ಥಿಗಳ ಅಂಕಪಟ್ಟಿಗಳನ್ನು ಯಾವುದೇ ಗೆಜೆಟೆಡ್ ಅಧಿಕಾರಿ ಅಥವಾ ಬ್ಯಾಂಕ್ ಮ್ಯಾನೇಜರ್ ಅಥವಾ ತಮ್ಮ ಶಾಲಾ /ಕಾಲೇಜು ಪ್ರಾಂಶುಪಾಲರಿಂದ ಸಹಿ ಮಾಡಿದ ಜೆರಾಕ್ಸ್ ಪ್ರತಿಗಳನ್ನು ONLINE ನಲ್ಲಿ ಕಳುಹಿಸಲು ಕೋರಿದೆ.

★ ಅರ್ಜಿಗಳನ್ನು ಕಳುಹಿಸಲು ಕೊನೆಯ ದಿನಾಂಕ – 15.10.2023

★ ಅರ್ಜಿಗಳನ್ನು ಪಡೆಯಲು **www.kavms.com** ಭೇಟಿ ಮಾಡಿ

ADTV

## ಮೈಸೂರು ನಗರದಲ್ಲಿ ಪಿ ಜಿ PG - Paying Guest ಲಭ್ಯವಿದೆ




ಮೈಸೂರು ನಗರದಲ್ಲಿ ಅಶೋಕ ರಸ್ತೆಗೆ ಹೊಂದಿಕೊಂಡಿರುವ ನೂತನವಾಗಿ ನಿರ್ಮಾಣವಾಗಿರುವ ಹಾಸ್ಟೆಲ್ ಕಟ್ಟಡದಲ್ಲಿ ಮೈಸೂರು ನಗರದಲ್ಲಿ ಉದ್ಯೋಗ ಮಾಡುತ್ತಿದ್ದು ಉತ್ತಮವಾದ ಪಿಜಿ ವ್ಯವಸ್ಥೆ ಬೇಕಾಗಿದ್ದಲ್ಲಿ

**ಸಂಪರ್ಕಿಸಿ: 9663900439**

ಅಪ್ಲಿಕೇಶನ್‌ಗಾಗಿ QR ಕೋಡನ್ನು ಸ್ಕ್ಯಾನ್‌ಮಾಡಿ

ವಿಶೇಷ ಸೂಚನೆ: ಕೇವಲ ಸಸ್ಯಹಾರಿಗಳಿಗೆ ಮಾತ್ರ ಅವಕಾಶ



## ಮೈಸೂರು ನಗರದಲ್ಲಿ ಮಹಾಸಭೆ–ಅಥಿತಿಗೃಹ

ಇನ್ನು ಮುಂದೆ ಮೈಸೂರು ನಗರ ಪ್ರವಾಸಕ್ಕೆ ಹೋಗುವವರಿಗೆ ಸಿಹಿ–ಸುದ್ದಿ ನಗರದ ಹೃದಯ ಭಾಗದಲ್ಲಿ ಅಂದರೆ ಬಸ್ ಮತ್ತು ರೈಲ್ವೆ ನಿಲ್ದಾಣಗಳಿಗೆ ನಡಿಗೆ ದೂರದಲ್ಲಿ ಮಹಾಸಭೆಯು ಅಥಿತಿಗೃಹಗಳನ್ನು ನಿರ್ಮಾಣ ಮಾಡಿದೆ .



ಸಂಪೂರ್ಣ ಕಾಮಗಾರಿಗಳು ಬಹುತೇಕ ಮುಗಿದ್ದಿದ್ದು, ಸಮಾಜ ಬಂಧುಗಳ ಸೇವೆಗೆ ಅತೀ ಶೀಘ್ರದಲ್ಲಿಯೇ ಲಭ್ಯವಿದೆ. ಅಥಿತಿಗೃಹಗಳಲ್ಲದೇ, ಸಾಮೂಹಿಕ ವಸತಿಗೃಹ (ಡಾರ್ಮೆಟರಿ) ಲಭ್ಯವಿದೆ. ಗುಂಪುಗಳಲ್ಲಿ ಮೈಸೂರು ನಗರಕ್ಕೆ ಪ್ರಯಾಣ ಬೆಳೆಸುವವರಿಗೆ ಇದೊಂದು ಉತ್ತಮವಾದ ಅವಕಾಶ ಸೆಪ್ಟೆಂಬರ್ 20 2023ರ ನಂತರ ಬುಕಿಂಗ್‌ಗಳಿಗಾಗಿ

**ಸಂಪರ್ಕಿಸಿ: 9663900439**

ADTV

ಮುದ್ರಕರು: ಗಿರೀಶ್ ಪ್ರಿಂಟರ್ಸ್, 163, 1ನೇ ಮುಖ್ಯರಸ್ತೆ, ಶೇಷಾದ್ರಿಪುರಂ, ಬೆಂಗಳೂರು – 560 020 ಇ–ಮೇಲ್ : info@gireeshprinters.com website : www.gireeshprinters.com
ಸಂಪಾದಕರು: ರಾ.ಪ. ರವಿಶಂಕರ್ ಮತ್ತು ಪ್ರಕಾಶಕರು: ಎಸ್ ಕೆ. ಶೇಷಾಚಲ ವಾರ್ತಾಪತ್ರ ಸಮಿತಿಯ ಚೇರ್‌ಮನ್, ಕರ್ನಾಟಕ ಆರ್ಯವೈಶ್ಯ ಮಹಾಸಭಾ ಪರವಾಗಿ, 16, ಶೇಷಾದ್ರಿರಸ್ತೆ, ಗಾಂಧಿನಗರ, ಬೆಂಗಳೂರು–09 ಫೋನ್: 22206151/22206152